# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 551 (499)
2. ಸದಸ್ಯರ ಹೆಸರು : ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 10-03-2020
4. ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳ ವತಿಯಿಂದ ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನಲ್ಲಿ ಕೈಗೊಂಡಿರುವ ಪಟ್ಟಣಕ್ಕೆ ಕೊಳವೆ ನೀರು ಸರಬರಾಜು ಯೋಜನೆ ಸಧ್ಯ ಯಾವ ಹಂತದಲ್ಲಿದೆ: | **ಕೆ.ಯು.ಐ.ಡಿ.ಎಫ್.ಸಿ** ವತಿಯಿಂದ ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಪೌರ ಸುಧಾರಣ (ಕೆ.ಎಂ.ಆರ್.ಪಿ)ಯ ಪೌರಬಂಡವಾಳ ಹೂಡಿಕೆ ಘಟಕದಡಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಪುರಸಭೆ ವ್ಯಾಪ್ತಿಯಲ್ಲಿ 2014-15 ನೇ ಸಾಲಿನಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ:<br>• 24/7 ನೀರು ಸರಬರಾಜು<br>• ಎಕ್ಸ್‌ಪ್ರೆಸ್ ಫಿಡರ್ ಮ್ಯೆನ್ ಕಾಮಗಾರಿ<br>ಮೇಲಿನ ಎರಡು ಕಾಮಗಾರಿಗಳು ದಿ:31.5.2017 ರಂದು ಪೂರ್ಣಗೊಂಡಿರುತ್ತದೆ.<br>24/7 ನೀರು ಸರಬರಾಜು ಕಾಮಗಾರಿಯ ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿಯ 5 ವರ್ಷಗಳಾಗಿದ್ದು, ಅದರಲ್ಲಿ 3 ವರ್ಷಗಳು ಮುಕ್ತಾಯಗೊಂಡಿರುತ್ತದೆ. ಇನ್ನು 2 ವರ್ಷಗಳು ಬಾಕಿಯಿರುತ್ತದೆ.<br>**ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ** ವತಿಯಿಂದ: ಪ್ರಸ್ತುತ ಕಾರವಾರ ಜಿಲ್ಲೆಯ ಹಳಿಯಾಳ ಪಟ್ಟಣಕ್ಕೆ ಮಂಡಳ ವತಿಯಿಂದ ಯಾವುದೇ ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಂಡಿರುವುದಿಲ್ಲ.<br>ಕಾರವಾರ ಜಿಲ್ಲೆಯ ಹಳಿಯಾಳ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ. ನಅಇ 43 ಯು.ಡಿ.ಎಸ್ 2015, ದಿ:06-12-2017 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಕಾಮಗಾರಿಗಳನ್ನು ದಿ:09-07-2019 ರಂದು ಪ್ರಾರಂಭಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ. |

<table>
<tr><td>ಆ)</td><td>ಸದರಿ ಯೋಜನೆ ಶಂಕು ಸ್ಥಾಪನೆಯಾಗಿದ್ದು, ಯಾವಾಗ;</td><td>ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಯೋಜನೆಯ ಶಂಕು ಸ್ಥಾಪನೆಯು ದಿನಾಂಕ:14.5.2014 ರಂದು ಆಗಿರುತ್ತದೆ.<br><br>ಕೆ.ಯು.ಡಬ್ಲ್ಯೂ..ಎಸ್& ಡಿ.ಬಿ ವತಿಯಿಂದ: ಹಳಿಯಾಳ ಪಟ್ಟಣದ ಒಳಚರಂಡಿ ಯೋಜನೆಗೆ ದಿನಾಂಕ:07-12-2017 ರಂದು ಶಂಕು ಸ್ಥಾಪನೆಯಾಗಿರುತ್ತದೆ.</td></tr>
<tr><td>ಇ)</td><td>ಈ ಯೋಜನೆಗಾಗಿ ಕಾಯ್ದಿರಿಸಲಾದ ಒಟ್ಟು ಅನುದಾನ ಎಷ್ಟು;</td><td>ಕೆ.ಯು.ಐ.ಡಿ.ಎಫ್.ಸಿ ವತಿಯಿಂದ 24/7 ನೀರು ಸರಬರಾಜು ಕಾಮಗಾರಿ ಗುತ್ತಿಗೆ ಮೊತ್ತ ರೂ.17.05 ಕೋಟಿಗಳು.<br><br>ಎಕ್ಸಪ್ರೆಸ್ ಫಿಡರ್ ಮೈನ್ ಕಾಮಗಾರಿ ಗುತ್ತಿಗೆ ಮೊತ್ತ ರೂ.2.12 ಕೋಟಿಗಳು.<br><br>ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ ವತಿಯಿಂದ: ಹಳಿಯಾಳ ಪಟ್ಟಣದ ಒಳಚರಂಡಿ ಯೋಜನೆಯನ್ನು ರೂ.76.20 ಕೋಟಿಗಳಲ್ಲಿ ಕೈಗೊಳ್ಳಲಾಗಿದ್ದು, ಯೋಜನೆ ಆರ್ಥಿಕ ಮಾದರಿ ಕೆಳಕಂಡಂತಿದೆ;<br><br>(ರೂ. ಕೋಟಿಗಳಲ್ಲಿ)<br><table><tr><td>ಕರ್ನಾಟಕ ಸರ್ಕಾರದ ಅನುದಾನ (ಶೇ.75)</td><td>57.15</td></tr><tr><td>ಆರ್ಥಿಕ ಸಂಸ್ಥೆಯ ಸಾಲ (ಶೇ.20)</td><td>15.24</td></tr><tr><td>ಸ್ಥಳೀಯ ಸಂಸ್ಥೆಯ ಪಾಲು (ಶೇ.5)</td><td>3.81</td></tr><tr><td>ಒಟ್ಟು</td><td>76.20</td></tr></table><br>2019-20 ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ರೂ.1000.00 ಲಕ್ಷಗಳಿಗೆ ಅವಕಾಶ ಕಲ್ಪಿಸಲಾಗಿದೆ.</td></tr>
<tr><td>ಈ)</td><td>ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು ಯಾವಾಗ;</td><td>ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ: 13.5.2009 ರಂದು ನೀಡಲಾಗಿರುತ್ತದೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ದಿನಾಂಕ: 17.10.2011 ರಂದು ನೀಡಲಾಗಿರುತ್ತದೆ.<br><br>ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ ವತಿಯಿಂದ ಹಳಿಯಾಳ ಪಟ್ಟಣದ ಒಳಚರಂಡಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ. ನಅಇ 43 ಯುಡಿಎಸ್ 2015, ದಿನಾಂಕ: 06-12-2017 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಆದೇಶ ದಿನಾಂಕ:14-11-2018 ರಲ್ಲಿ ತಾಂತ್ರಿಕ ಅನುಮೋದನೆ ನೀಡಲಾಗಿದೆ.</td></tr>
</table>

| | | |
|---|---|---|
| ಉ) | ಗುತ್ತಿಗೆಯನ್ನು ಯಾವ ಏಜೆನ್ಸಿಗೆ ನೀಡಲಾಗಿದೆ; ಮತ್ತು ಗುತ್ತಿಗೆ ಕರಾರಿನನ್ವಯ ಕಾಮಗಾರಿಯನ್ನು ಯಾವ ಅವಧಿಯೊಳಗೆ ಮುಕ್ತಾಯಗೊಳಸಲು ಸೂಚಿಸಲಾಗಿತ್ತು? | **ಕೆ.ಯು.ಐ.ಡಿ.ಎಫ್.ಸಿ** ವತಿಯಿಂದ 24/7 ನೀರು ಸರಬರಾಜು ಕಾಮಗಾರಿಯ ಗುತ್ತಿಗೆಯನ್ನು ಮೆಃಜೈನ್ ಇರಿಗೇಷನ್ ಸಿಸ್ಟಮ್ ಲಿ. ಜಲಗಾವ ರವರಿಗೆ ನೀಡಲಾಗಿರುತ್ತದೆ. ಗುತ್ತಿಗೆ ಕರಾರಿನನ್ವಯ ಕಾಮಗಾರಿಯು ದಿನಾಂಕ: 14.5.2015 ರಂದು ಪೂರ್ಣಗೊಳ್ಳಬೇಕಾಗಿತ್ತು, ಆದರೆ ಕಾಲಾವಧಿ ವಿಸ್ತರಣೆಯೊಂದಿಗೆ ದಿನಾಂಕ: 31.5.2017 ರಂದು ಪೂರ್ಣಗೊಂಡಿರುತ್ತದೆ.<br><br>ಎಕ್ಸಪ್ರೆಸ್ ಫಿಡರ್ ಮೈನ್ ಕಾಮಗಾರಿಯ ಗುತ್ತಿಗೆಯನ್ನು ಮೆಃಪ್ರವೀಣ್ ಇಲೆಕ್ಟ್ರಿಕಲ್ಸ್ ರವರಿಗೆ ನೀಡಲಾಗಿರುತ್ತದೆ. ಗುತ್ತಿಗೆ ಕರಾರಿನನ್ವಯ ಕಾಮಗಾರಿಯು ದಿನಾಂಕ: 18.9.2015 ರಂದು ಪೂರ್ಣಗೊಳ್ಳಬೇಕಾಗಿತ್ತು, ಆದರೆ ಕಾಲಾವಧಿ ವಿಸ್ತರಣೆಯೊಂದಿಗೆ ದಿನಾಂಕ: 29.2.2016 ರಂದು ಪೂರ್ಣಗೊಂಡಿರುತ್ತದೆ.<br><br>**ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ** ವತಿಯಿಂದ ಹಳಿಯಾಳ ಪಟ್ಟಣದ ಒಳಚರಂಡಿ ಯೋಜನೆಯ ಕಾಮಗಾರಿಗಳನ್ನು ಟೆಂಡರ್ ಆಧಾರದಲ್ಲಿ ಮೆ॥ ಸುಪ್ರದಾ ಕನ್ಸ್‌ಸ್ಟ್ರಕ್ಷನ್ಸ್ ಪ್ರೈ. ಲಿ., ಧಾರವಾಡ, ಇವರಿಗೆ ಕರಾರು ಒಪ್ಪಂದದ ಸಂಖ್ಯೆ:06/ 2019-20 ದಿನಾಂಕ:6-7-2019 ರಲ್ಲಿ ವಹಿಸಲಾಗಿದೆ. ಗುತ್ತಿಗೆ ಕರಾರು ಒಪ್ಪಂದದ ಪ್ರಕಾರ, ಯೋಜನೆ ಕಾಮಗಾರಿಯನ್ನು 36 ತಿಂಗಳುಗಳ ಅವಧಿಯಲ್ಲಿ ಪೂರ್ಣಗೊಳಸಬೇಕಾಗಿರುತ್ತದೆ. |

ಕಡತ ಸಂಖ್ಯೆ : ನಅಇ 72 ಪಿ.ಆರ್.ಜೆ 2020

**(ಬಿ.ಎ. ಬಸವರಾಜ)**
ನಗರಾಭಿವೃದ್ಧಿ ಸಚಿವರು.